# ದೂರದೃಷ್ಟಿಯ ನಾಯಕರ ಕೊರತೆ

ಜನರನ್ನು ಭಾವನಾತ್ಮಕ ನೆಲೆಯಲ್ಲಿ ಪ್ರಚೋದಿಸುವುದಕ್ಕೆ ಧರ್ಮವನ್ನೂ ಭಾಷೆಯನ್ನೂ, ಪ್ರಾದೇಶಿಕತೆಯನ್ನೂ ಬಳಸಿಕೊಳ್ಳುವುದು ರಾಜನೀತಿಯ ತಂತ್ರಗಳು. ರಾಜ್ಯಗಳ ಅಧಿಕಾರ ಚುಕ್ಕಾಣಿ ಹಿಡಿದವರು ದೂರದೃಷ್ಟಿ ತಾಳದಿದ್ದರೆ ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಸಮಾನ ಅಭಿವೃದ್ಧಿಯನ್ನು ಕಾಣುವುದು ಸಾಧ್ಯವಿಲ್ಲ.

ತೆಲಂಗಾಣ ರಾಜ್ಯದ ಬೇಡಿಕೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿ ತತ್ಕಾಲದ ವಿಷಮ ಸನ್ನಿವೇಶವನ್ನು ನಿವಾರಿಸಿಕೊಂಡಿದೆ. ಒಂದು ಪ್ರದೇಶದ ಜನತೆ ಕಾನೂನು ಕೈಗೆತ್ತಿಕೊಳ್ಳುವಂಥ ಸನ್ನಿವೇಶ, ಜತೆಗೆ ನಾಯಕತ್ವ ವಹಿಸಿದ ಕೆ.ಚಂದ್ರಶೇಖರ ರಾವ್ ಸತ್ಯಾಗ್ರಹ ಹೂಡಿ ಆತ್ಮಾಹುತಿಗೆ ಯತ್ನಿಸಿದ್ದರಿಂದ ಉಂಟಾದ ಬಿಕ್ಕಟ್ಟಿನಿಂದ ಪಾರಾಗಲು ಇದಕ್ಕಿಂತ ಬೇರೆ ಪರಿಹಾರ ಮಾರ್ಗ ಕೇಂದ್ರ ಸರ್ಕಾರಕ್ಕೆ ಇರಲು ಸಾಧ್ಯವಿರಲಿಲ್ಲ. ಜನರ ಆಕ್ರೋಶ, ಕಾನೂನು ವ್ಯವಸ್ಥೆಗೆ ಧಕ್ಕೆ, ಉಪವಾಸ ತಂತ್ರಗಳ ಒತ್ತಡದಿಂದ ಪ್ರತ್ಯೇಕ ರಾಜ್ಯದಂಥ ಮಹತ್ವದ ಬೇಡಿಕೆಯನ್ನೂ ಈಡೇರಿಸಿಕೊಳ್ಳಬಹುದೆಂಬ ಸಂದೇಶವಂತೂ ಇದರಿಂದ ರವಾನೆಯಾಗಿದೆ. ಗೂರ್ಖಾಲ್ಯಾಂಡ್, ಬೋಡೋಲ್ಯಾಂಡ್, ವಿದರ್ಭ, ಹರಿತ್ ಪ್ರದೇಶ, ಪೂರ್ವಾಂಚಲ (ಬುಂದೇಲ್‌ಖಂಡ) ಮೊದಲಾಗಿ ಪ್ರತ್ಯೇಕ ರಾಜ್ಯಗಳ ಬೇಡಿಕೆಗೆ ಹೊಸ ಹಕ್ಕೊತ್ತಾಯಗಳು ಮಂಡನೆಯಾಗಿವೆ. ಈ ಬೇಡಿಕೆಗಳನ್ನು ಹೊತ್ತ ನಿಯೋಗಗಳು ಪ್ರಧಾನಿಯವರನ್ನೂ, ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನೂ ಭೇಟಿ ಮಾಡಲಾರಂಭಿಸಿವೆ.

'ಸಣ್ಣದೆಲ್ಲ ಸುಂದರ' ಎಂಬುದೇನೋ ಕೇಳಲು ಇಂಪಾದ ಬಣ್ಣನೆ. ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಸಣ್ಣ ವ್ಯಾಪ್ತಿ ಇದ್ದರೆ ಒಳ್ಳೆಯದು ಎಂಬ ವಾದವೂ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಾದಗಳಿಗೂ, ಪ್ರತಿವಾದಗಳಿಗೂ ಕೊನೆ ಮೊದಲು ಇರುವುದಿಲ್ಲ. ಸ್ವಾತಂತ್ರ್ಯ ಬಂದಾಗ ದೇಶದಲ್ಲಿ 513 ಸಂಸ್ಥಾನಗಳಿದ್ದವು. ಅವೆಲ್ಲವನ್ನೂ ಬೇರೆ ಬೇರೆ ಮಾನದಂಡಗಳಿಗೆ ಒಳಪಡಿಸಿ 19 ರಾಜ್ಯಗಳಿಗೆ ಅಳವಡಿಸಲಾಯಿತು. ಭಾಷೆ, ಗಡಿ, ಪ್ರದೇಶ, ಸಂಸ್ಕೃತಿ ಮೊದಲಾದ ಮಾನದಂಡಗಳನ್ನು ಅನುಲಕ್ಷಿಸಿ ಇನ್ನಷ್ಟು ರಾಜ್ಯಗಳಾದವು. ಭಾಷೆಯನ್ನು ಆಧರಿಸಿದ ಭಾವನಾತ್ಮಕ ಬಾಂಧವ್ಯ ಅಭಿವೃದ್ಧಿಯನ್ನು ತರಬಲ್ಲದು ಎಂಬ ನಂಬಿಕೆಯಿಂದ ಆದದ್ದು ಭಾಷಾವಾರು ಪ್ರಾಂತ್ಯಗಳ ರಚನೆ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ ಮೊದಲಾದ ರಾಜ್ಯಗಳ ಗಡಿರೇಖೆಗಳು ಪುನರ್ ರೂಪಿತವಾದದ್ದು ಭಾಷಾವಾರು ಮಾನದಂಡದಿಂದ.

ದೇಶಗಳ ಗಡಿ ರೇಖೆ ಅವುಗಳ ಸಾರ್ವಭೌಮತ್ವ ಸ್ವರೂಪವನ್ನು ಪ್ರಚುರಪಡಿಸಿದಂತೆ ರಾಜ್ಯಗಳ ಮಧ್ಯೆ ಇರುವ ಗಡಿಗಳಲ್ಲಿ ಅಂಥ ಸೂಕ್ಷ್ಮತೆ ಇರುವುದಿಲ್ಲ. ಆದರೆ, ಭಾವನಾತ್ಮಕ ಸಂಗತಿಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಸಂಭವನೀಯತೆಯ ಕಾರಣ ಈಗಲೂ ರಾಜ್ಯಗಳ ಮಧ್ಯೆ ಗಡಿ ತಂಟೆಗಳು ಆಗಾಗ ತಲೆದೋರುತ್ತವೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಗಡಿ ಸಮಸ್ಯೆ ಕೊಟ್ಟು ತೆಗೆದುಕೊಳ್ಳುವ ಸೌಹಾರ್ದತೆಯಿಂದ ನಡೆಯಬೇಕೆಂಬ ಭಾವದ ಕೊರತೆ ಇಂಥ ಸಮಸ್ಯೆಗಳನ್ನು ಜೀವಂತವಾಗಿಯೇ ಇರಿಸಿದೆ.

ಒಂದೇ ಭಾಷೆ ಮಾತಾಡುವವರೆಲ್ಲ ಒಂದು ಆಡಳಿತ ವ್ಯವಸ್ಥೆಗೆ ಒಳಪಟ್ಟರೆ ಆ ಪ್ರದೇಶ ಸಮಾನವಾಗಿ ಅಭಿವೃದ್ಧಿ ಕಾಣುತ್ತದೆ ಎಂಬ ಆಶಯ ಈಡೇರಿಲ್ಲ ಎಂಬುದಕ್ಕೆ ಪ್ರಾದೇಶಿಕ ಅಸಮಾನತೆಯ ಧ್ವನಿ ಹೆಚ್ಚಿನ ದೊಡ್ಡ ರಾಜ್ಯಗಳಲ್ಲಿ ಎದ್ದಿರುವುದೇ ಸಾಕ್ಷಿ. 'ನಾವೆಲ್ಲ ಭಾರತೀಯರು, ಮೊದಲು ದೇಶ, ನಂತರ ನಮ್ಮ ರಾಜ್ಯ ಎಂಬ ದೃಷ್ಟಿಯನ್ನು ತಾಳುವುದೂ ಪ್ರಶ್ನಾರ್ಹ' ಎಂಬಂತಹ ಮನಸ್ಥಿತಿ ಕೂಡ ಉಳಿದುಕೊಂಡಿದೆ. ಜನರನ್ನು ಭಾವನಾತ್ಮಕ ನೆಲೆಯಲ್ಲಿ ಪ್ರಚೋದಿಸುವುದಕ್ಕೆ ಧರ್ಮವನ್ನೂ ಭಾಷೆಯನ್ನೂ, ಪ್ರಾದೇಶಿಕತೆಯನ್ನೂ ಬಳಸಿಕೊಳ್ಳುವುದು ರಾಜನೀತಿಯ ತಂತ್ರಗಳು. ರಾಜ್ಯಗಳ ಅಧಿಕಾರ ಚುಕ್ಕಾಣಿ ಹಿಡಿದವರು ದೂರದೃಷ್ಟಿ ತಾಳದಿದ್ದರೆ ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಸಮಾನ ಅಭಿವೃದ್ಧಿಯನ್ನು ಕಾಣುವುದು ಸಾಧ್ಯವಿಲ್ಲ ಎಂಬುದು ಹಲವು ದಶಕಗಳಿಂದ ಭಾಷಾವಾರು ಪ್ರಾಂತ್ಯಗಳಾಗಿ ಉಳಿದಿರುವ ರಾಜ್ಯಗಳಲ್ಲಿ ಕಾಣುತ್ತಿರುವ ವಾಸ್ತವ. ನಾಯಕತ್ವದ ವೈಫಲ್ಯ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿ ಅದು ಜನತೆಯಲ್ಲಿ ಅಸಮಾಧಾನದ ಹೊಗೆ ಎಬ್ಬಿಸುತ್ತದೆ. ಇದು ಚಳವಳಿಯ ಹಾದಿ ಹಿಡಿದರೆ ಅದರ ಪರಿಣಾಮ ಕಾಯ್ದೆ ವ್ಯವಸ್ಥೆಯ ಮೇಲೆ ಆಗುತ್ತದೆ.

ಒಕ್ಕೂಟ ವ್ಯವಸ್ಥೆಯಲ್ಲಿ ದೇಶದ ಎಲ್ಲ ಭಾಗಗಳಲ್ಲಿಯೂ ಏಕರೀತಿಯ ಅಭಿವೃದ್ಧಿ ಆಗಬೇಕು. ಜನರ ಜೀವನಮಟ್ಟ ಉತ್ತಮ ಮಟ್ಟದಲ್ಲಿ ಸುಧಾರಣೆ ಆಗಬೇಕು. ಸಂಪತ್ತಿನ ಸಮಾನ ಹಂಚಿಕೆಯಾಗಿ ನಿಜವಾದ ಸಮಾಜವಾದಿ ಸಮಾಜ ಏರ್ಪಟ್ಟರೆ ದೇಶ ಎಲ್ಲ ರಂಗಗಳಲ್ಲಿ ಮುನ್ನಡೆಯುತ್ತದೆ ಎಂಬುದು ಸ್ವಾತಂತ್ರ್ಯ ಗಳಿಸಿದ ಆರು ದಶಕಗಳ ನಂತರವೂ ಕಾಗದದಲ್ಲಿ ಉಳಿದುಕೊಂಡಿರುವ ಆದರ್ಶ ಕಲ್ಪನೆ. ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಯೇನೋ ಆಗಿದೆ, ಆದರೆ ಅಸಮಾಧಾನವೂ ಉಳಿದುಕೊಂಡಿವೆ. ಸರ್ವ ಜನಾಂಗದ ಶ್ರೇಯಸ್ಸನ್ನು ಸಾಧಿಸುವ ದೂರದೃಷ್ಟಿಯ ರಾಜಕೀಯ ನಾಯಕತ್ವದ ಅವಶ್ಯಕ ಎಂಬುದನ್ನು ಇಂಥ ಪರಿಸ್ಥಿತಿ ನೆನಪಿಸುತ್ತದೆ.

■ ಲಕ್ಷ್ಮಣ ಕೊಡಸೆ

